> ವಾರವಾಯಿತು, ಹುಡುಗಿ ನಾಪತ್ತೆ. ತಾಳ್ಮೆಗೆಟ್ಟು ಅವಳ ಮನೆಗೆ ಹೋದ. ಬಾಗಿಲಲ್ಲೇ ಅವಳ ತಾಯಿ ತಡೆದಳು. 'ಅವಳಿಗೆ ಪಾಠ ಸಾಕು ಮೇಷ್ಟ್ರೆ' ಗದರುವ ಪರಿ ಹೇಳಿದವಳೇ ರಪ್ಪನೆ ಬಾಗಿಲು ಮುಚ್ಚಿಕೊಂಡಳು. ಒಳಗೆ ಕುಲುಕುಲು ನಗೆ ಕೇಳಿ ಬಂತು...

ಒಂದುವಾರ ತಾನೆ ಎಂದು ಹನಿಗಣ್ಣಾದ. ಮಂತ್ರಾಲಯಕ್ಕೆ ತಾನೂ ಪ್ರೋಗ್ರಾಮ್ ಇಟ್ಟ. ಅಜ್ಜನೂ ಗಂಟು ಬೀಳಬೇಕೆ.

ಬಸ್ಸಲ್ಲಿ ಕೂತಾಗ ಆ ಪೊಗದಸ್ತಾದ ಹುಡುಗಿಯನ್ನು ಕಂಡು ಮೊಮ್ಮಗನ ಯಾತ್ರೆಯ ಅಸಲಿಯತ್ತು ಅಜ್ಜನಿಗೆ ಮನವರಿಕೆಯಾಗಿತ್ತು. ಆದವಾನಿ ಬರುವವರೆಗೂ ಭಗವಂತನನ್ನೇ ನೋಡುವ ಭಕ್ತನ ಪರಿ ಆ ಹುಡುಗಿಯತ್ತಲೇ ಆರಾಧನಾ ನೋಟ ಬೀರಿ ಕುಳಿತಿದ್ದ ಮೊಮ್ಮಗನನ್ನು ಕಂಡು ಉರಿ ಹತ್ತುವ ಬದಲು ಮರುಕ ಉಂಟಾಯಿತು ಅಜ್ಜಂಗೆ. ಆದವಾನಿ ಬರುತ್ತಲೇ ಹುಡುಗಿ ತಾಯಿಯೊಂದಿಗೆ ಇಳಿದು ಹೋದ ಮೇಲೆಯೇ ಹುಡುಗನಿಗೆ ಅಜ್ಜನ ನೆನಪು. 'ಕಾಫಿ ಏನಾರ ಕುಡಿತೀರಾ?' ವಿಚಾರಿಸಿದ. ಅಜ್ಜ ಮಾತನಾಡದೆ ನಿದ್ದೆಗೆ ಶರಣಾದಂತೆ ಪೋಜ್ ಕೊಟ್ಟ. ಹುಡುಗ ಮಂತ್ರಾಲಯದಲ್ಲಿ ಬಿಡಾರ ಹೂಡಿದ. ತುಂಗಾಸ್ನಾನ ಮಾಡಿದ. ಬೆಳಗ್ಗೆಯೇ ಎದ್ದು ಉರುಳುಸೇವೆ ಸಲ್ಲಿಸಿ ಬೃಂದಾವನದ ಮುಂದೆ ಹಾಜರಾಗಿ ಕರಜೋಡಿಸಿ ನಿಂತ. 'ಆ ಹುಡುಗಿನಾ ನನ್ನ ಜೊತೆ ಲಗ್ನ ಮಾಡಿಸಪ್ಪಾ ಗುರುವೆ' ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದ. ಪಂಚಾಮೃತ ಸೇವೆ ಮಾಡಿಸಿ, ಪರಿಮಳ ಪ್ರಸಾದ ಕಣ್ಣೊತ್ತಿ ಬಾಯಿಗಿಟ್ಟ. 'ಏನ್ಲಾ ಇದು ಈ ಪಾಟಿ ಭಕ್ತಿ!' ಎಂದ ಅಜ್ಜ ಬೆಕ್ಕಸ ಬೆರಗು. 'ನಾನು ವಿಶ್ವವಿಖ್ಯಾತ ವೈಣಿಕ ವಿದ್ವಾನಾಗಬೇಕು ತಾತ' ಹುಡುಗನಂದಾಗ ಅಜ್ಜ ಅವನ ತಪ್ಪನ್ನೆಲ್ಲಾ ಮನ್ನಿಸಿ ಬಿಟ್ಟಿತು. ಊರಿಗೆ ಬರುತ್ತಲೇ ಸಂತೆ ಬಾಗಿಲ ಗಣಪತಿ ಉತ್ಸವ ಮಂಡಳಿಯಿಂದ ವೀಣಾ ಪ್ರೋಗ್ರಾಮ್ ನೀಡಲು ಆಹ್ವಾನ. 'ರಾಯರೇ ನಿಮ್ಮ ಕೃಪೆ ಅನಂತ' ಎಂದು ಪುಳಕಿತನಾದ. ಭರ್ಜರಿ ಉತ್ಸವದಲ್ಲಿ ಆ ಹುಡುಗಿಯನ್ನೂ ಕೂರಿಸಿಕೊಂಡು ಜೋಡಿ ವೀಣಾ 'ಜುಗಲ್‌ಬಂದಿ' ನಡೆಸಿಕೊಟ್ಟು ಮರುದಿನವೇ ದುರ್ಗದ ಮನೆಯ ಮಾತಾಗಿಬಿಟ್ಟ. ಧರ್ಮಶಾಲಾ ರಸ್ತೆಯಲ್ಲೆಲ್ಲಾ ಇದೇ ಗುಲ್ಲು. ಆದವಾನಿಯಿಂದ ಬಂದಿದ್ದ ಟೆಕ್ಕಿಯೊಬ್ಬ 'ಜೋಡಿ ವೀಣಾ' ಪ್ರೋಗ್ರಾಮ್ ನೋಡಿ ಮನಸೋತನೆಂದೂ ಆ ಹುಡುಗಿಯ ವೀಣಾ ಪ್ರೋಗ್ರಾಮ್‌ನ್ನು ತಾನು ನೆಲೆಸಿರುವ ಕ್ಯಾಲಿಫೋರ್ನಿಯಾದಲ್ಲಿ ಇಡಿಸುತ್ತಾನೆಂದೂ ಹೊಸ ಗುಲ್ಲು ಬೇರೆ. ಎರಡುದಿನ ಹುಡುಗಿ ಮ್ಯೂಸಿಕ್ ಸೆಂಟರ್‌ಗೆ ಆಬ್ಸೆಂಟ್ ಆದಳು. ಎರಡೂ ದಿನವೂ ತಾಯಿಯೊಂದಿಗೆ ಸೂಟುಧಾರಿ ಎಂಜಿನಿಯರ್ ಜೊತೆ ಸಿನಿಮಾಗೆ, ಬಜಾರ್‌ಗೆ ಹೋದದನ್ನು ಕಂಡಾಗ ಹುಡುಗನ ಹೊಟ್ಟೆಗೆ ಬೆಂಕಿ ಬಿದ್ದಂತಹ ಎಫೆಕ್ಟ್. ವೀಣೆಯನ್ನು ಮುಟ್ಟಲೂ ಮುಜುಗರ. ಮೂರನೇದಿನ ತಳಮಳ ತಾಳಲಾರದೆ ಹುಡುಗಿಯ ಮನೆಗೇ ಹೋದ. ಹುಡುಗಿ ಇವನ ಡೈಯಾದ ಮೋರೆ ನೋಡಿ ಕುಲು ಕುಲು ನಕ್ಕಳು. 'ಅಂತದ್ದೇನಾಯ್ತೀಗ?' ಎಂದವನ ಕೆನ್ನೆ ಹಿಂಡಿ 'ಮುಗ್ಧ' ಎಂದು ಹಾಸ್ಯಕ್ಕೀಡಾದಳು. ಅವಳ ತಾಯಿ ಶಂಕರಮಠದಲ್ಲಿ ಹೂಬತ್ತಿ ಹೊಸೆಯಲು ಹೋಗಿದ್ದಳು. ತಂದೆ ಕಚೇರಿಗೆ. ಇವನು ನೇರ ಅವರ ಮನೆ ದೇವರ ಕೋಣೆಗೇ ನುಗ್ಗಿಬಿಟ್ಟ. ದೇವರಪಟಗಳನ್ನೆಲ್ಲಾ ಕೆಕ್ಕರಿಸಿದ. 'ಎಲ್ಲಿ ನನ್ನ ಫೋಟೊ ಇಡ್ತೀನಿ ಅಂದಿದ್ದೈಲ್ಲಾ?' ಎಂದು ಅಳುತ್ತಲೇ ಜಬರಿಸಿದ. 'ಸತ್ತದೇವರಪಟಗಳ ಜೊತೆ ನಿಮ್ಮ ಫೋಟೊ ಅಶುಭ ಸರ್. ನನ್ನ ಮನದಲ್ಲಿದ್ದರೆ ಸಾಲದೆ?' ಎಂದು